ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

<u>ಸಿ.ಸಿ. ನಂ.: 1523/2022</u>

..............................................................................

CW 01
PW 01

| | | |
|---|---|---|
| ಹೆಸರು | : | ದೇಮಾಣಿ ಗುಂಡು ಕೇಸರೇಕರ |
| ತಂದೆಯ ಹೆಸರು | : | ಗುಂಡು |
| ವಯಸ್ಸು | : | 60 ವರ್ಷ |
| ಉದ್ಯೋಗ | : | ರೈತಾಪಿ ಕೆಲಸ |
| ವಾಸಸ್ಥಳ | : | ಹವಗಿ, ತಾಃ ಹಳಿಯಾಳ. |

ದಿನಾಂಕ 24-01-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ</u>** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ಚಾಸಾ 2 ಮತ್ತು 3 ರವರು ನನಗೆ ಪರಿಚಯ. ಚಾಸಾ 4 ರಿಂದ ಚಾಸಾ 11, ಚಾಸಾ 16 ರಿಂದ ಚಾಸಾ 20 ರವರು ಪರಿಚಯ ಇಲ್ಲ. ಚಾಸಾ 12 ರಿಂದ 15 ರವರು ಪರಿಚಯ. ಆರೋಪಿತರನ್ನು ಈ ಮೊದಲು ನೋಡಿಲ್ಲ.

ಸುಮಾರು 4 ವರ್ಷಗಳ ಹಿಂದೆ ನಾನು ನನ್ನ ಹೊಲದ ಹತ್ತಿರ ಮೋಟಾರ ಸೈಕಲ್ ನಿಲ್ಲಿಸಿದ್ದೆ ಅದು ಕಳ್ಳತನವಾಗಿತ್ತು ಎಂದು ದೂರು ನೀಡಿದ್ದೆ. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಮೇರೆಗೆ ದೂರನ್ನು **ನಿಪಿ 1** ಎಂದು, ಸಾಕ್ಷಿ ಸಹಿಯನ್ನು **ನಿಪಿ 1–ಎ** ಎಂದು ಗುರುತಿಸಲಾಯಿತು. ದೂರನ್ನು ಕಳ್ಳತನವಾದ 4 ದಿನಗಳ ನಂತರ ನೀಡಿದ್ದೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ಯಾರು ಯಾರು ಇರುತ್ತಾರೆ ಎಂದು ಗುರುತಿಸಲಾಗುವುದಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ಘಟನಾ ಜಾಗೆಯ ಪಂಚನಾಮೆಯಾಗಿದ್ದು ಅದರಲ್ಲಿ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 2 ಎಂದು, ಸಾಕ್ಷಿ ಸಹಿಯನ್ನು **ನಿಪಿ 2–ಎ** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಯಾವಾಗ ಮತ್ತು ಎಲ್ಲಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ.

ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ನನ್ನ ಮೋಟಾರ ಸೈಕಲ್ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**<u>ಪಾಟೀ ಸವಾಲು :</u> ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕಃ 18-07-2022 ರಂದು ದೂರು ನೀಡಿ ದಿನಾಂಕಃ 24-07-2022 ರಂದು ಸಂಜೆ 4.00 ಗಂಟೆಗೆ ಮೋಟಾರ ಸೈಕಲ್ ಮೇಲೆ ಮನೆಯಿಂದ ಹೊರಟು ಹೂಲಕ್ಕೆ ಹೋಗುವ ಕಾಲುದಾರಿಯಲ್ಲಿ ಮೋಟಾರ ಸೈಕಲ್ ನಿಲ್ಲಿಸಿತ್ತು ಹೋಗಿ ಸಂಜೆ 6.00 ಗಂಟೆ ಸುಮಾರಿಗೆ ಹೊಲದಿಂದ ಬಂದು ನೋಡಿದಾಗ ಮೋಟಾರ ಸೈಕಲ್ ಕಾಣುತ್ತಿರುಲಿಲ್ಲ ಅದನ್ನು ಹಳಿಯಾಳ ಶಹರದಲ್ಲಿ ಎಲ್ಲ ಕಡೆ ಹುಡುಕಾಡುತ್ತಾ ನಿಮ್ಮ ಊರಿನ ಚಾಸಾ 12 ಮತ್ತು ಚಾಸಾ 13 ರವರಿಗೆ ವಿಚಾರಿಸಿದಾಗ ಅವರು ನೋಡಿಲ್ಲ ಎಂದು ಹೇಳಿದರು ನೀವು ವಾಪಸ್ಸು ಜಾಗಕ್ಕೆ ಹೋಗಿ ನೋಡಿದಾಗ ಮೋಟಾರ ಸೈಕಲ್ ಇರಲಿಲ್ಲ ಆದ್ದರಿಂದ ಮೋಟಾರ ಸೈಕಲ್ ಕಳುವು ಆಗಿದೆ ಎಂದು, ಅದೇ ದಿನ ದೂರು ನೀಡಿದ್ದಿರಿ ಎಂದರೆ ಸರಿ. ನಿಮ್ಮ ಮೋಟಾರ ಸೈಕಲ್ ನಂಬರ ಕೆಎ-31-ಎಸ್ 9789 ಆಗಿತ್ತು ಎಂದರೆ ಸರಿ. ದಿನಾಂಕಃ 18-07-2022 ರಂದು ನಿಮ್ಮ ಹೊಲದ ಹತ್ತಿರ ಬಂದು ಚಾಸಾ 2 ಮತ್ತು ಚಾಸಾ 3 ರವರ ಸಮಕ್ಷಮ ನೀವು ತೋರಿಸಿದ ಜಾಗದಲ್ಲಿ ಮಧ್ಯಾಹ್ನ 3.15 ರಿಂದ 4.15 ರವರೆಗೆ ಪಂಚನಾಮೆ ಜರುಗಿಸಿ ನಿಮ್ಮ ಸಹಿ ಪಡೆದರು ಎಂದರೆ ಸರಿ. ಆ ಸಮಯದಲ್ಲಿ ಪೋಲಿಸರು ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಪೋಲಿಸರು ಕಚ್ಚಾ ನಕಾಶೆಯನ್ನು ತೆಗೆದಿರುತ್ತಾರೆ ಎಂದರೆ ಸರಿ. ದಿನಾಂಕಃ 28-07-2022 ರಂದು ಪೋಲಿಸರಿಗೆ ಹೇಳಿಕೆ ನೀಡಿ ಅದರಲ್ಲಿ ದಿನಾಂಕಃ 14-07-2022 ರಂದು ಕಳುವು ಮಾಡಿದ ಹೋದವರು ದುರ್ಗಪ್ಪಾ ಹೆಳವರ ಮತ್ತು ಸಮೀರಉಲ್ಲಾ, ಜುಬೇರಾ ಖಾನ ಪಠಾಣ ಎಂದು ಪೋಲಿಸರು ತೋರಿಸಿದರು ಎಂದರೆ ಸರಿ. ದುರ್ಗಪ್ಪಾ ಹೆಳವರ, ಸಮೀರಉಲ್ ಮತ್ತು ಕಿಶನ ಗೊಂದಳಿ ರವರು ಸೇರಿ ಅಳ್ನೊಳ್ಳಿ ಕ್ರಾಸ ಹತ್ತಿರ ನಿಲ್ಲಿಸಿದ ಮೋಟಾರ ಸೈಕಲನ್ನು ಕಳ್ಳತನ ಮಾಡಿರುತ್ತಾರೆ ಎಂದು ಹೇಳಿದರು ಮತ್ತು ಜುಬೇರಾ ಖಾನ ಪಠಾಣ ರವರು ಮೋಟಾರ ಸೈಕಲನ ಸಂಪೂರ್ಣ ಬಿಡಿ ಭಾಗಗಳನ್ನು ಬಿಚ್ಚಿ ಮಾರಾಟ ಮಾಡಿದ ಬಗ್ಗೆ ಮತ್ತು ಬಂದ ಹಣವನ್ನು 4 ಜನ ಹಂಚಿ ಕೊಂಡ ಬಗ್ಗೆ ನಿಮ್ಮ ಸಮ್ಮುಖದಲ್ಲಿ ತಿಳಿಸಿದರು ಎಂದರೆ ಸರಿಯಲ್ಲ. ಸಾಕ್ಷಿ ಅವರ ಮರುಹೇಳಿಕೆಯನ್ನು ಅಲ್ಲಗಳೆದ ಮೇರೆಗೆ ಅದನ್ನು **ನಿಪಿ 3** ಎಂದು ಗುರುತಿಸಲಾಯಿತು. ಆ ದಿನ ಠಾಣಯಲ್ಲಿ ನಿಮಗೆ ಆರೋಪಿ ನಂ. 1 ರಿಂದ 3 ರವರನ್ನು ತೋರಿಸಿದರು ಎಂದರೆ ಸರಿಯಲ್ಲ, ಸಾಕ್ಷಿ ತೋರಿಸಿಲ್ಲ ಎನ್ನುತ್ತಾರೆ. ಆ ದಿನ ಠಾಣಯಲ್ಲಿ ನಿಮಗೆ ಆರೋಪಿ ನಂ. 1 ರಿಂದ

3 ರವರನ್ನು ತೋರಿಸಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳ ಸಾಕ್ಷ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** ಆರೋಪಿ 1, 2 ಮತ್ತು 4 ಪರ ಶ್ರೀ ಜಿ ವಿ ಕೆ ವಕೀಲರಿಂದ.

ದೂರು ಮತ್ತು ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನಿಮಗೆ ಮಾಹಿತಿ ಇಲ್ಲ ಎಂದರೆ ಸರಿ. ಪೋಲಿಸರು ಬರೆದ ದೂರು ಮತ್ತು ಪಂಚನಾಮೆಗೆ ಸಹಿ ಮಾಡಿರುತ್ತೀರಿ ಎಂದರೆ ಸರಿ.

**<u>ಪಾಟೀ ಸವಾಲುಃ</u>** ಆರೋಪಿತ 3 ರವರ ಪರ ವಕೀಲರು ಆರೋಪಿ 1, 2 ಮತ್ತು 4 ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.